ಮೈಸೂರ ಗೆಜಿಟ್

ಸರ್ಕಾರದಿಂದ ಪಾಯಿಷ್ ಆದ್ದು.

ಬೆಂಗಳೂರು, ಶನಿವಾರ, ಏಪ್ರೆಲ್ ತಾ॥ 12, ಸ್ರ್ 1884.

ಈ ಭಾಗವನ್ನು ಪ್ರತ್ಯೇಕ ಸೇರಿಸಿ ಇಡುವ ಬಗ್ಯೆ ಇದಕ್ಕೆ ಬೇರೇಯಾಗಿ ಪುಟ ಸಂಖ್ಯೆ ಕೊಡಲ್ಪಡುತ್ತೆ.

2ನೇ ಭಾಗ.

ಇಂಡ್ಯಗವರ್ಮೆಂಟ್, ರೆಸಿಡೆಂಟರು, ಚೀಫ್ ಜಡ್ಜ್ರೀರುವಗೈರೇರಿಂದ ಕೊಡೋಣಾದ ಇಸ್ತಿಹಾರ್ನಾಮೆಗಳು.

ಫಿನಾರ್ಷಿಯಲ್ ಇಲಾಖಾ.

1882ನೇ ಮೈಸೂರು ರೆಯಿಲ್‌ವೇ ಲೋರ್.

ತಾರೀಖು 6ನೇ ಜುಲೈ 1883.

ಲಂಡ್ರನಲ್ಲಿ ಬಡ್ಡೀ ಸಲ್ಲತಕ್ಕ ಬಗ್ಯೆ, ಷರಾ ಬರೆಯಲ್ಪಡಬಹುದಾದಂತಾ ಸದರೀ ಸಾಲದ ಡಿಬೆಂಚರ್‌ಗಳ ವೇಲೆ ಲಂಡ್ರನಲ್ಲಿ, ಸ್ಟ್ರಾಂಡ್ ಬೀದಿ 59ನೇ ನಂಬರ್ ಕಟ್ಟಡದಲ್ಲಿರುವ ಬ್ಯಾಂಕರ್‌ಗಳಾದ ಮೆಸ್ಸರ್ಸ್ ಕೌಟ್ಸ್ ಅಂಡ್ ಕೋಯವರು ಬಡ್ಡೀಯನ್ನು ಪಾವತೀ ಮಾಡುವ ಬಗ್ಯೆ ಅವರುಗಳೊಡನೆ ಮೈಸೂರು ಗವರ್ಮೆಂಟಿನವರು ಯೇರ್ಪಾಡು ಮಾಡಿಕೊಂಡಿರುವದರಿಂದ ಲಂಡ್ರನಲ್ಲಿ ತಮ್ಮ ಡಿಬೆಂಚರ್‌ಗಳಿಗೆ ಬಡ್ಡೀಯನ್ನು ತೆಗದುಕೊಳ್ಳಲಿಕ್ಕೆ ಯಿಷ್ಟವುಳ್ಳ ಜನಗಳು ತಮ್ಮ ಡಿಬೆಂಚರ್‌ಗಳನ್ನು ಎಷ್ಟೇನ್‌ಮೆಂಟ್ ಯಾನೇ ಷರಾ ಬಗ್ಯೆ ಇದರಡಿ ರುಜು ಮಾಡಿರುವರ ಆಫೀಸಿಗೆ ಕಳುಹಿಸತಕ್ಕದ್ದು.

ಬಡ್ಡೀಯು, ಮದ್ರಾಸ್‌ನಲ್ಲಿ ಮದರಾಸ್ ಬ್ಯಾಂಕಿನ ಮೇಲೆ, ಡ್ಯೂಪ್ಲಿಕೇಟಾದ ಡಿವಾಂಡ್ ಡ್ರಾಫ್ಟ್ಸ್ ಯೆಂಬ ಚೆಕ್ಕುಗಳ ಮೂಲಕ ರೂಪಾಯಿಗಳಾಗಿ ಕೊಡಲ್ಪಡುವದು.

ಎಷ್ಟೇಸ್‌ಮೆಂಟ್ ಬಗ್ಯೆ ಫೀ ಯೇನೂ ಚಾರ್ಜ್ ಮಾಡಲ್ಪಡಲಾರದು.

ಹೆಚ್. ಹಡಿರ್ಸ,
ಕಾಂಪ್ಟ್ರೋಲರ್.

ಕೋಲಾರ ಡಿಸ್ಟ್ರಿಕ್ಟು.

ತಾರೀಖು 1ನೇ ಏಪ್ರೆಲ್ 1884.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ, ಸ್ರ 1884—85ನೇ ಇಸವಿ ತಾರಣ ಸಂವತ್ಸರಕ್ಕೆ ಕೋಲಾರ ಡಿಸ್ಟ್ರಿಕ್ಟು ಚಿಂತಾಮಣಿ ತಾಲ್ಲೂಕಿನ ಬಾಬತು ಅರಗು ಮತ್ತು ಕುರಂಗದ ಕಲ್ಲುಗಳ ಇಜಾರೆ ಪ್ರತ್ಯೇಕ ಪ್ರತ್ಯೇಕವಾಗಿ ಆ ತಾಲ್ಲೂಕು ಕಛೇರಿಯಲ್ಲಿ ಅಮಲ್‌ದಾರ್‌ರವರ ರೂಬರೂ ಸ್ರ 1884ನೇ ಇಸವಿ ಏಪ್ರಲ್ ತಾರೀಖು 21ರಲ್ಲು ಹರಾಜು ಮೂಲಕ ವಿಕ್ರಯಿಸಲ್ಪಡುತ್ತೆ, ಆ ತಾರೀಖಿಗೆ ಸರಿಯಾಗಿ ಇಚ್ಛೈವುಳ್ಳವರು ಆಮಿಾಲರ ರೂಬರೂ ಹಾಜರಾಗಿ ಪೋಟುಪೋಟಿ ಮಾಡಬಹುದು. ಈ ಹರಾಜು ಸದರೀ ತಾರೀಖು ದಿವಿ 11 ಘಂಟೆ ಲಾಗಾಯತು ಸಾಯಿಂಕಾಲ 5 ಘಂಟೆ ವರಿಗೆ ನಡಿಸಲ್ಪಡುವದು. ಈ ಹರಾಜು ಕೋಲಾರ ಡಿಸ್ಟ್ರಿಕ್ಟು ಡೆಪ್ಯುಟಿ ಕಮ್ಮಿಷನರ ಸಾಹೇಬರವರ ಮಂಜೂರಾತಿಗೆ ವಳಪಟ್ಟು ಇರುತ್ತೆ.

ಹರಾಜು ಪೂರೈಸಿದ ವಡನೆ ಛಡಸವಾಲ್‌ದಾರನು ಹರಾಜು ಮೊಬಲಗಿಗೆ ಶೇಕಡಾ 25 ರೂಪಾಯಿಮೇರಿಗೆ ತೇವಣಿ ಇಡಬೇಕು, ಡೆಪ್ಯುಟಿ ಕಮ್ಮಿಷನರ್ ಸಾಹೇಬರವರಿಂದ ಮಂಜೂರ್ಮಾಡಲ್ಪಟ್ಟ ಸಂಗತಿ ತಿಳಿಸಲ್ಪಟ್ಟ ವಡನೆ ಬಾಕಿ ಮೊಬಲಗನ್ನು ಹರಾಜ್ ಮೊಬಲಗಿಗೆ ರೂಪಾಯಿ ವಂದಕ್ಕೆ ವಂದಾಣೆ ಮೇರಿಗೆ ಲೋಕಲ್ ಸೆಸ್ ಸಹಿತ ಪಾವತಿ ಮಾಡಬೇಕು. ಅಥವಾ ಆಮಲ್‌ದಾರರಿಂದ ಮೊಕರರ್ ಮಾಡಲ್ಪಡುವ ಖಿಸ್ತುಗಳ ಪ್ರಕಾರ ಪಾವತೀ ಮಾಡಲು ಬದ್ಧನಾಗಿ ಕ್ರಮಪ್ರಕಾರ ಮುಚ್ಚಳಿಕೆಯನ್ನು ಮತ್ತು ಖಾತರ್ ಜಾಮೀನಿಯನ್ನು ಸಹಾ ಕೊಡಬೇಕು; ಮೇಲ್ಕಂಡ ಷರತ್ತುಗಳ ಪೈಕಿ ಯಾವದಕ್ಕೆ ತಪ್ಪಿದಾಗ್ಯೂ ಸದರೀ ಬಾಬುಗಳು ಪುನಃ ಹರಾಜ್ ಮಾಡಲ್ಪಡುವದು. ಲುಕ್ಸಾನ್ ಮೊಬಲಗು ತಪ್ಪಿದ ಛಡಸವಾಲ್‌ದಾರನಿಂದ ರೆವಿನ್ಯೂ ಕಂದಾಯದ ಬಾಕಿಯಂತೆ ವಸೂಲ್ಮಾಡಲ್ಪಡುವದು.

ಈ ಹರಾಜ್ ವಿಷಯದಲ್ಲಿ ಇನ್ನು ಯೇನಾಪರು ಹೆಚ್ಚು ತಪಶೀಲು ತಿಳಿದುಕೊಳ್ಳಲು ಅಪೇಕ್ಷೆವುಳ್ಳವರು ಆಮಿಲರಿಂದ ತಿಳಿದುಕೊಳ್ಳ ಬಹುದು.

ಜಿ. ರಘುನಾಥ ರಾವ್,
ಫಾರ್ ಡೆ॥ ಕಮ್ಮಿಷನರ್.

ತುಮಕೂರು ಡಿಸ್ಟ್ರಿಕ್ಟ್ ಸಬಾರ್ಡಿನೇಟ್ ಜಡ್ಜೀಯವರ ಕೋರ್ಟ್‌ನಲ್ಲಿ.

ದಿವಾಳಿಯಾದ ಡಿಕ್ರಿ ದೇಣೇದಾರ ಶೀರಾ ತಾ॥ ಹಂದಿಕುಂಟೆಯಲ್ಲಿರುವ ಶಾನುಭಾಗ ವೆಂಕಟ್ರಾಮಯ್ಯನ ವಿಷಯದಲ್ಲಿ—

ಸ್ ಱ 1884ನೇ ಇಸವಿ ದಿವಾಳಿ ವ್ಯಾಜ್ಯ ನಂಬರು 3.

ಹುಕ್ಕುಂ.

ಮೇಲ್ಕಂಡ ಶಾನುಭಾಗ ವೆಂಕಟ್ರಾಮಯ್ಯ ಖುಲಾಸೆಯಾಗಬೇಕೆಂದು ಕೋರಿ ಬರದುಕೊಂಡ ಅರ್ಜಿಯು ಮೆಸ್ಸರ್ ಸಿ. ಕ್ರೈಸ್ ಸಾಹೇಬರ ರೂಬರೂ ಅರ್ಜಿದಾರನ ಪರವಾಗಿ ಇವನ ಸಮಕ್ಷಮದಲ್ಲಿಯೂ ಮತ್ತು ಐರ್ಜ ಅರ್ಜಿದಾರನ ಲೇಣೇದಾರರಾದವರ ಪೈಕಿ ಶಿರಾ ತಾಲ್ಲೂಕು ಕಲ್ಲಹಳ್ಳಿ ಮುದ್ದೇಗವುಡನ ಯದುರಾಗಿಯೂ ದರ್ಯಾಫ್ತೀ ಮಾಡಲ್ಪಟ್ಟಿತು.

ಈ ಕೆಳಗೆ ನಮೂದಿಸಲ್ಪಡುವ ಲೇಣೇದಾರ್‌ರಿಗೆ ಈ ದರ್ಯಾಫ್ತಿ ನೋಟೀಸ್ ಜಾರಿಯಾಗಿದ್ದಾಗ್ಯೂ ತಾವೆ ಖುದ್ದಾಗಿಯಾಗಲಿ ಲಾಯರ್ ಮೂಲಕವಾಗಿಯಾಗಲಿ ಹಾಜರಾಗುವದಕ್ಕೆ ತಪ್ಪಿ ಹೋದರು, ಯಾರೆಂದರೆ—ಮಡಿಕಶೀರಾ ತಾಲ್ಲೂಕು ಗುಡಿಬಂಡೇಲಿರುವ ಭೋಜಪ್ಪ.

ಸದರೀ ಶಾನುಭಾಗ ವೆಂಕಟರಾಮಯ್ಯನು ದೀವಾಳಿಯಾದವನೆಂದೆನ್ನು ಸಿವಿಲ್ ಪ್ರೊಸಿಜ್ಯೂರ್ ಕೋಡಿನ 20ನೇ ಅಧ್ಯಾಯದಲ್ಲಿನ ನಿರೂಪಣೆಗಳ ಫಲವನ್ನು ಹೊಂದುವದಕ್ಕೆ ಹಕ್ಕುದಾರನಾಗಿರುತ್ತಾನೆಂದು ಇದರಿಂದ ತೀರ್ಮಾನಿಸಲ್ಪಟ್ಟಿರುತ್ತದೆ. ಈ ಕೋರ್ಟು ನಾಜರು ಐರ್ಜ ದಿವ್ಹಾಳಿಯಾದವನ ಪೈಂದಗಿಗೆ ರಿಸೀವರಾಗಿ ಮೊಕರರ್ಮಾಡಲ್ಪಡತಕ್ಕದ್ದೆಂದುನ್ನು ಸದರೀ ರಿಸೀವರಾದವನು ವಡನೆ ದಿವಾಳಿಯಾದವನ ಪೈಂಧಗಿಗೂ ಜವಾಬ್ ಮಾಡತಕ್ಕ ಬಗ್ಯೂನಿಗೇಪಾನಿ ಮಾಡತಕ್ಕ ಬಗ್ಯೂ ಸಹ ತನ್ನ ರಿಸೀವರ ಕೆಲಸಗಳಿಗೆ ವುದ್ಯುಕ್ತಪಡತಕ್ಕದ್ದೆಂದುನ್ನು ಮತ್ತು ಸದರೀ ರಿಸೀವರನು ತಾನು ನಡಿಸಿದ ಕೆಲಸಗಳ ಪ್ರತಿ ಫಲಕ್ಕಾಗಿ ದಿವಾಳಿಯಾದವನ ಲೇಣೇದಾರರಿಗೆ ಬಟವಾಡೆ ಮಾಡಬೇಕೆಂದು ಸಹ ಹುಕ್ಕುಂ ಮಾಡಲ್ಪಟ್ಟು ಇದೆ.

ಸ್ ಱ 1884ನೇ ಇಸವಿ ಮಾರ್ಚೀ 27ನೇ ತಾರೀಖಿನಲ್ಲು ಕೋರ್ಟು ಮೊಹರ್ ನಮ್ಮ ದಸ್ತಖತ್ತು ನಿಸಿ ಕೊಡಲ್ಪಟ್ಟಿತು.

ಸಿ. ಕ್ರೈಸ್,
ಸಬ್-ಜಡ್ಜ.

ಮೈಸೂರು ಡಿಸ್ಟ್ರಿಕ್ಟ್.

ಮೈಸೂರು ಡಿಸ್ಟ್ರಿಕ್ಟ್ ಜಡ್ಜೀಯವರ ಕೋರ್ಟ್‌ನಲ್ಲಿ.

1884ನೇ ಇಸವಿ ಅರ್ಜೀ ನಂಬರ್ 130.

ವೃತಪಟ್ಟ ಪರಮೇಶ್ವರಶಟ್ಟಿ ಆಸ್ತೀ ವಿಷಯದಲ್ಲಿ—

ಅರ್ಜೀದಾರ ಹೊನ್ನಪ್ಪ ವೃತಪಟ್ಟ ಸದರೀ ಪರಮೇಶ್ವರಶಟ್ಟಿಗೆ ಹಿರೇ ಮಗ ಆಗಬೇಕೆಂಬ ಹಕ್ಕುದಾರಿ ಮೇಲೆ ನಾಗಮಂಗಲ ತಾ॥ ನೆಲ್ಲೀಗೆರೆ ಹೋಬಳಿ ಬೆಳ್ಳೂರು ಸ್ಥಳದ ಸದರೀ ಹೊನ್ನಪ್ಪನು, ಸದರೀ ವಾಸಸ್ಥನಾಗಿ ವೃತಪಟ್ಟ ಪರಮೇಶ್ವರಶಟ್ಟಿ ಜಿಂದಗಿ ಬಗ್ಯಾಗಿ ಬರತಕ್ಕ 1,000 ರೂಪಾಯಿಗಳ ಸಾಲವನ್ನು ವಸೂಲ್ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾನೆ.